ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುಮುಖ್ಯ ವಿಚಾರಣೆ - ಶ್ರೀ ಕೆ ಎಲ್ ಎನ್ ವಾದಿ ಪರ ವಕೀಲರಿಂದಃ

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ದಾವಾ ಅನುಸೂಚಿ ಸ್ವತ್ತಾದ ಹೊನ್ನೇನಹಳ್ಳಿ ಕಾವಲು ಸರ್ವೆ ನಂ. 17 ವಿಸ್ತೀರ್ಣ 04 ಎಕರೆ 00 ಗುಂಟೆ ಜಮೀನಿನ ಪಹಣಿ ಪತ್ರಿಕೆಯನ್ನು ನಿಪಿ 1, ಎಂ ಆರ್ ನಂ. ಹೆಚ್ 7 2014-15 ದೃಢೀಕೃತ ಪ್ರತಿಯನ್ನು ನಿಪಿ-2, ದಿಃ 20-04-2016 ರಂದು ನೊಂದಾವಣಿಯಾದ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ವನ್ನು ನಿಪಿ3, ನನ್ನ ಸಹಿಯನ್ನು ನಾನು ನೋಡಿ ಗುರ್ತಿಸುತ್ತಿದ್ದು ಅದನ್ನು ನಿಪಿ-3(ಎ), 2 ನೇ ಪ್ರತಿವಾದಿ ಧರ್ಮರಾಜು ಇವರ ಸಹಿಯನ್ನು ನಿಪಿ-3(ಬಿ), 3 ನೇ ಪ್ರತಿವಾದಿಯಾದ ಯಶೋಧ ಇವರ ಸಹಿಯನ್ನು ನಿಪಿ-3(ಸಿ), ಸಾಕ್ಷಿದಾರರಾದ ರುದ್ರಯ್ಯ ಮತ್ತು ಮಹೇಶ ಇವರುಗಳ ಸಹಿಯನ್ನು ಕ್ರಮವಾಗಿ ನಿಪಿ3(ಡಿ) ಮತ್ತು ನಿಪಿ-3(ಇ) ಎಂದು ಗುರ್ತಿಸಲಾಯಿತು. ಪತ್ರ ಬರಹಗಾರರಾದ ಹೆಚ್ ಎಂ ಹೀರೇಂದ್ರ ಇವರ ಸಹಿಯನ್ನು ನಿಪಿ-3(ಎಫ್) ಎಂದು ಗುರ್ತಿಸಲಾಯಿತು.

ದಿಃ 25-09-2017 ರಂದು ನಮ್ಮ ವಕೀಲರ ಮೂಲಕ ಪ್ರತಿವಾದಿ 1 ರಿಂದ 3 ರವರಿಗೆ ಕಾನೂನು ರೀತ್ಯಾ ನೋಟೀಸ್ ನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು ವಕೀಲರ ಕಛೇರಿಯ ಪ್ರತಿಯನ್ನು ನಿಪಿ-4, ಮೂರು ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ5 ರಿಂದ 7, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ-8 ಮತ್ತು 9, 3 ನೇ ಪ್ರತಿವಾದಿ ಯಶೋಧ ಇವರಿಗೆ ನೋಟೀಸ್ ಜಾರಿಯಾಗಿದೆಯೋ ಅಥವಾ ಇಲ್ಲಾ ಎಂಬುದರ ಬಗ್ಗೆ ಅಂಚೆ ಇಲಾಖೆಗೆ ದಾಖಲೆಗಳನ್ನು ಒದಗಿಸಲು ಒಂದು ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ನಿಪಿ-10, ಅಂಚೆ ಇಲಾಖೆಯವರು ನೀಡಿರುವ ಹಿಂಬರಹವನ್ನು ನಿಪಿ-11 ಎಂದು ಗುರ್ತಿಸಲಾಯಿತು.

ಕಾರಣ ನನ್ನ ದಾವಾದಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಒ

(ಶಶಿಧರ ಎಂ. ಗೌಡ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.

ಬೇಲೂರು.